**ಓ ಎಸ್ 9/2021 ಡಿಡಬ್ಲ್ಯೂ1**

**ಸಾಕ್ಷಿಯನ್ನು ದಿಃ 12.11.2025 ರಂದು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ಶ್ರೀ ಎಂ ಎಸ್ ವಕೀಲರಿಂದಃ**

ನನ್ನ ತಾತನ ಹೆಸರು ಕರೀಗೌಡ, ಅಜ್ಜಿಯ ಹೆಸರು ಸಣ್ಣಮ್ಮ. ಅವರಿಬ್ಬರೂ ಮೂಲತಃ ಚಂದ್ರೆ ಗ್ರಾಮಕ್ಕೆ ಸೇರಿದವರು. ಅವರಿಬ್ಬರಿಗೂ ಚಂದ್ರೆ ಗ್ರಾಮದಲ್ಲಿ ಸರ್ವೆ ನಂ. 10/1, 46, 52, 87, 88, 92/3, 93 ಹಾಗೂ ಎರಡು ಮನೆಗಳು ಇವೆ. ಸದರಿ ಜಮೀನುಗಳ ವಿಸ್ತೀರ್ಣ ಮತ್ತು ಚಕ್ಕುಬಂದಿ ಸರಿಯಾಗಿ ಗೊತ್ತಿಲ್ಲ. ಪಾಂಡವಪುರಗ್ರಾಮದಲ್ಲಿ ಎರಡು ಮನೆಗಳು ಇವೆ. ಪಾಂಡವಪುರ ಸರ್ವೆ ನಂ. 63/2 ರಲ್ಲಿ 39 ಗುಂಟೆ, 75/4 ರಲ್ಲಿ 1 ಎಕರೆ 01 ಗುಂಟೆ, 72/1 ಎ ನಲ್ಲಿ 32 ಗುಂಟೆ, 72/1 ಎ ರಲ್ಲಿ 6 ಗುಂಟೆ, 72/1 ರಲ್ಲಿ 15 ಗುಂಟೆ, 72/1 ರಲ್ಲಿ 20 ಗುಂಟೆ, 35 ರಲ್ಲಿ 35 ಗುಂಟೆ, 35/1 ಅಥವಾ 3 ರಲ್ಲಿ 5 ಗುಂಟೆ ಮತ್ತು 230 ರಲ್ಲಿ 5 ಗುಂಟೆ ಇವೆ. ಈ ಮೇಲೆ ಹೇಳಿದ ಆಸ್ತಿಗಳ ಪೈಕಿ 75/4 ರಲ್ಲಿ 41 ಗುಂಟೆ, 72/1 ಎ ನಲ್ಲಿ 32 ಗುಂಟೆ, 72/1 ಎ ರಲ್ಲಿ 6 ಗುಂಟೆ ಈ ಆಸ್ತಿಗಳು ನಮ್ಮ ಅಜ್ಜಿ ಸಣ್ಣಮ್ಮನ ಹೆಸರಿನಲ್ಲಿ ಇವೆ. ನಮ್ಮ ತಾತ ಕರೀಗೌಡರ ಹೆಸರಿನಲ್ಲಿ ಪಾಂಡವಪುರದಲ್ಲಿ ಒಂದು ಮನೆ ಇದೆ. ಇನ್ನುಳಿದ ಆಸ್ತಿಗಳ ಪೈಕಿ ಕೆಲವನ್ನು ಒಟ್ಟು ಕುಟುಂಬದಲ್ಲಿದ್ದಾಗ ನಮ್ಮ ತಂದೆ ಹೆಸರಿನಲ್ಲಿ ಇನ್ನು ಕೆಲವನ್ನು ನಮ್ಮ ಚಿಕ್ಕಪ್ಪ ನಾಗರಾಜೇಗೌಡ ಮತ್ತು ವೆಂಕಟೇಶರವರ ಹೆಸರಿನಲ್ಲಿ ಕ್ರಯಕ್ಕೆ ಪಡೆಯಲಾಗಿದೆ. ಚಂದ್ರೆ ಗ್ರಾಮದ ಆಸ್ತಿಗಳ ಬಗ್ಗೆ ನನಗೆ ಹೆಚ್ಚಾಗಿ ಮಾಹಿತಿ ಇಲ್ಲ.

ಪಾಂಡವಪುರ ಗ್ರಾಮದ ಸರ್ವೆ ನಂ. 35 ರಲ್ಲಿ 40 ಗುಂಟೆ ಜಮೀನು ನಮ್ಮ ಚಿಕ್ಕಪ್ಪ ವೆಂಕಟೇಶರವರ ಸ್ವಯಾರ್ಜಿತ ಆಸ್ತಿ ಎಂದರೆ ಒಟ್ಟು ಕುಟುಂಬದಲ್ಲಿದ್ದಾಗ ಕ್ರಯಕ್ಕೆ ಪಡೆದಿರುವ ಕಾರಣ ಅದು ಒಟ್ಟು ಕುಟುಂಬದ ಆಸ್ತಿಯಾಗಿದೆ. ಅದು ಅವರ ಸ್ವಂತ ಆಸ್ತಿಯಾಗಿದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಂಡವಪುರದಲ್ಲಿ ಒಂದು ನಿವೇಶನವೂ ಇದೆ ಎಂದರೆ ಶಾಂತಿನಗರದಲ್ಲಿ ಒಂದು ನಿವೇಶನ ಇದೆ. ಸಾಕ್ಷಿ ಮುಂದುವರಿದು ಆ ನಿವೇಶನವನ್ನು ತಮ್ಮ ತಂದೆ ಬದುಕಿದ್ದಾಗ ಒಟ್ಟು ಕುಟುಂಬದಲ್ಲಿ ಕ್ರಯಕ್ಕೆ ಪಡೆಯಲಾಗಿದೆ ಎಂದು ಹೇಳುತ್ತಾರೆ.

ದಾವಾ ಐಟಂ ನಂ.1 ರಿಂದ 4 ನಮ್ಮ ಅಜ್ಜ ಮತ್ತು ಅಜ್ಜಿಯ ಜೀವನೋಪಾಯಕ್ಕೆ ಉಳಿಸಿಕೊಂಡಂತಹ ಅಜ್ಜಪಾಲು ಆಸ್ತಿ ಎಂದರೆ ಸರಿ. ಅವರಿಬ್ಬರೂ ಬದುಕಿರುವವರೆಗೂ ಆ ಆಸ್ತಿಗಳನ್ನು ಅವರೇ ಅನುಭವಿಸಿಕೊಂಡು ಬರತಕ್ಕದ್ದು ಎಂದು ಆಗಿತ್ತು ಎಂದರೆ ಸರಿ. ಅವರು ಬದುಕಿರುವವರೆಗೂ ಆ ಆಸ್ತಿಗಳಿಗೆ ಸಂಬಂಧಿಸಿದಂತೆ ಯಾವುದೇ ದಾಖಲೆ ವಗೈರೆ ಮಾಡಬಾರದು ಎಂದು ಆಗಿತ್ತು ಎಂದರೆ ಸರಿ. ಬಹಳ ಹಿಂದೆಯೇ ನನ್ನ ತಂದೆ ಹಾಗೂ ಚಿಕ್ಕಪ್ಪಂದಿರು ಮತ್ತು ನನ್ನ ಅಜ್ಜ ಅಜ್ಜಿಯ ನಡುವೆ ಆದ ಮೌಖಿಕ ವಿಭಾಗದಲ್ಲಿ ನನ್ನ ಅಜ್ಜ ಮತ್ತು ಅಜ್ಜಿ ಪಾಲಿಗೆ ಹೋದ ಅಜ್ಜಪಾಲಿನ ಆಸ್ತಿಗಳಾದ ದಾವಾ ಆಸ್ತಿಗಳನ್ನು ಅವರಿಗೇ ಉಳಿಸಿ ಉಳಿದ ಆಸ್ತಿಗಳನ್ನು ನಮ್ಮ ತಂದೆ ಹಾಗೂ ಚಿಕ್ಕಪ್ಪಂದಿರು ಮೌಖಿಕವಾಗಿ ಬಹಳ ಹಿಂದೆಯೇ ವಿಭಾಗ ಮಾಡಿಕೊಂಡರು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ದಾವಾ ಆಸ್ತಿಗಳನ್ನು ಸೇರಿದಂತೆ ಎಲ್ಲಾ ಆಸ್ತಿಗಳನ್ನು ಎರಡು ಪಾಲುಪಟ್ಟಿ ಮೂಲಕ ವಿಭಾಗ ಮಾಡಿಕೊಂಡಿದ್ದಾರೆ ಎಂದು ಹೇಳುತ್ತಾರೆ.

**ಮುಂದುವರಿದ ಪಾಟೀ ಸವಾಲಿಗೆ ಕಾಲಾವಕಾಶ ನೀಡಲಾಯಿತು.**

**(ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ)**

**ಸಾ ಓ ಹೇ ಸ ಒ**

**(ಬಾಬು ಎನ್)**
**1 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಪಾಂಡವಪುರ**